ಪಾಕ್ಷಿಕ

# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



**ಗುಜರಾತ್:** ಕಚ್‌ನ ಕ್ರೀಕ್ ಪ್ರದೇಶದಲ್ಲಿರುವ ಲಕ್ಕಿ ನಾಲಾದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು BSF, ಸೇನೆ, ನೌಕಾಪಡೆ ಮತ್ತು ವಾಯುಪಡೆಯ ಯೋಧರೊಂದಿಗೆ ದೀಪಾವಳಿಯನ್ನು ಆಚರಿಸಿದರು.

ಸಂಪುಟ : 46 | ಸಂಚಿಕೆ : 14 | ಆಶ್ವಯುಜ–ಕಾರ್ತಿಕ | ಕಲಿಯುಗಾಬ್ದ 5126 | 15–11–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ಭಾರತೀಯ ಕಥನಗಳಿಗೆ ಸತ್ಯವೇ ಆಧಾರ

ಇತ್ತೀಚಿನ ವೈಚಾರಿಕ ಚರ್ಚಾಗೋಷ್ಠಿಗಳಲ್ಲಿ ನರೇಟಿವ್ ಶಬ್ದವನ್ನು ಹೆಚ್ಚಾಗಿ ಕೇಳುತ್ತೇವೆ. ಮಾಧ್ಯಮಗಳ ಸುದ್ದಿಗಳಲ್ಲೂ, ಅಂಕಣಬರಹಗಳಲ್ಲೂ ಈ ಶಬ್ದ ಹೆಚ್ಚಾಗಿಯೇ ಸುಳಿದಾಡುತ್ತಿದೆ. ವೈಚಾರಿಕ ವಲಯದಲ್ಲಿ ನರೇಟಿವ್ (Narrative) ಎಂದು ಹೆಚ್ಚು ಪ್ರಚಲಿತವಾಗಿರುವ ಇಂಗ್ಲಿಷ್ ಪದದ ಕನ್ನಡ ಸಮಾನಾರ್ಥಕ ಪದವೇ 'ಕಥನ'. Narration ಪದದಿಂದ Narrative ಪದ ಹುಟ್ಟಿಕೊಂಡಿದೆ. ಅದರಂತೆ ವಿಷಯ ಅಥವಾ ವಿದ್ಯಮಾನವೊಂದನ್ನು ಕಥೆ–ಕಥಾನಕದಂತೆ ನಿರೂಪಿಸುವುದು ಎಂಬ ಅರ್ಥದಲ್ಲಿ 'ಕಥನ' ಶಬ್ದ ಬಳಕೆಯಲ್ಲಿದೆ. ಆಖ್ಯಾನ, ನಿರೂಪಣೆ ಮುಂತಾದ ಶಬ್ದಗಳೂ ಬಳಕೆಯಲ್ಲಿವೆ. ಕಥನ ಅಂದರೆ ನರೇಟಿವ್ (Narrative). ಸಂಕಥನ ಅಂದರೆ ಡಿಸ್ಕೋರ್ಸ್ (Discourse). ಎಲ್ಲಾ ಭಾರತೀಯ ಕಥನಗಳು ಸತ್ಯದ ಆಧಾರದಲ್ಲಿ ಮೂಡಿಬಂದಿದೆ. ಕಥನ ಎಂದರೆ ಸತ್ಯವಾದ ಘಟನೆಗಳ ನಿರೂಪಣೆ ಅಥವಾ ಕಾಲ್ಪನಿಕವಾಗಿ ಕಟ್ಟಲ್ಪಟ್ಟ ಕಥಾನಕ – ಎರಡೂ ಆಗಿರಬಹುದು. ಅಂದರೆ ಕಥನವು ವಾಸ್ತವದ ನೆಲೆಗಟ್ಟಿನಲ್ಲೂ ಕಟ್ಟಲ್ಪಡುತ್ತದೆ. ಕೆಲವೊಮ್ಮೆ ಅವಾಸ್ತವ ಅಥವಾ ಕಲ್ಪಿತ, ಪೂರ್ತಿ ಸತ್ಯವಲ್ಲದ ಸಂಗತಿಗಳಿಂದಲೂ ಕಥನಗಳು ಹುಟ್ಟಿಕೊಳ್ಳುತ್ತವೆ. ಕಥನ (Narrative)ಕ್ಕೆ ಪ್ರತಿಕ್ರಿಯೆಯಾಗಿ ಪ್ರತಿಕಥನ (Counter Narrative)ಗಳು ರೂಪುಗೊಳ್ಳುತ್ತವೆ.

ಯಾವುದೇ ಒಂದು ಅಭಿಪ್ರಾಯವನ್ನು ಹಲವರು ಪದೇ ಪದೇ ಹೇಳುವ ಅಥವಾ ವಿಭಿನ್ನ ದಾರಿಗಳ ಮೂಲಕ ಹಲವರಿಂದ ಹೇಳಿಸುವ, (ಅಂದರೆ ಲೇಖಕರು ಬರವಣಿಗೆಯ ಮೂಲಕ, ಪತ್ರಕರ್ತರು ಸುದ್ದಿಯನ್ನು ತಮಗೆ ಬೇಕಾದ ಧ್ವನಿಯಲ್ಲಿ ನಿರೂಪಿಸುವ ಮೂಲಕ, ಸಾಹಿತಿಗಳು ಭಾಷಣದ ಮೂಲಕ, ಸಿನಿಮಾದ ಮೂಲಕ, ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಸಂಶೋಧನಾ ಲೇಖನದ ಮೂಲಕ) ಕೊನೆಗೆ ಆ ಅಭಿಪ್ರಾಯವನ್ನು ಒಂದು ಸಾಮೂಹಿಕ ಅಭಿಪ್ರಾಯವನ್ನಾಗಿ ನಿರೂಪಿಸುವ ಯೋಜಿತ ತಂತ್ರಗಾರಿಕೆಯ ಪ್ರಯತ್ನ 'ಕಥನ–ನರೇಟಿವ್' ಎಂದು ಕರೆಯಲ್ಪಡುತ್ತದೆ. ಮಾಧ್ಯಮ ವಲಯ, ಅಕಾಡೆಮಿಯಾ ಅಂದರೆ ವಿಶ್ವವಿದ್ಯಾಲಯಗಳು, ಸಾಹಿತಿಗಳು, ವೈಚಾರಿಕ ಕ್ಷೇತ್ರದ ಪ್ರಮುಖರು, ಸಿನಿಮಾ– ರಂಗಭೂಮಿ, ಅಧಿಕಾರದ ರಾಜಕಾರಣ, ಪ್ರಭಾವಿ ಸೆಲೆಬ್ರಿಟಿಗಳು, ಸೋಷಿಯಲ್ ಮೀಡಿಯಾ – ಇವೆಲ್ಲರೂ ಸೇರಿದ ಒಂದು ಪ್ರಭಾವಿವಲಯವು (Influential Ecosystem) ಕಥನ ನಿರ್ಮಾಣ ಹಾಗೂ ಪ್ರಸರಣದಲ್ಲಿ ಮುಖ್ಯಪಾತ್ರ ವಹಿಸುತ್ತದೆ.

ವಿವಿಧ ಪತ್ರಿಕೆಗಳಲ್ಲಿ ಮತ್ತು ಟಿ.ವಿ. ಮುಂತಾದ ಮಾಧ್ಯಮಗಳಲ್ಲಿ ಅನೇಕ ವಿಚಾರಗಳನ್ನು ಬೇರೆ ಬೇರೆ ಕ್ಷೇತ್ರಗಳಿಗೆ ಸೇರಿದವರು/ಪತ್ರಕರ್ತರು/ವಿದ್ವಾಂಸರು ಹಂಚಿಕೊಳ್ಳುತ್ತಾರೆ. ಅಲ್ಲದೆ ವಿವಿಧೆಡೆಗಳಲ್ಲಿ ನಡೆಯುವ ಸಮ್ಮೇಳನ, ವಿಚಾರಸಂಕಿರಣ, ಉಪನ್ಯಾಸ ಇತ್ಯಾದಿ ಕಾರ್ಯಕ್ರಮಗಳಲ್ಲಿ ವಿದ್ವಾಂಸರು ಮಾತನಾಡುತ್ತಾರೆ. ಹೀಗೆ ಸಾರ್ವಜನಿಕರನ್ನು ಉದ್ದೇಶಿಸಿ ಬರೆಯುವ, ಮಾತನಾಡುವ ಸಂದರ್ಭಗಳಲ್ಲಿ ನಡೆಯುವ ಸಂವಾದ – ವಾಗ್ವಾದಗಳನ್ನು ನಾವು ಸಾರ್ವಜನಿಕ ಸ್ಪೇಸ್‌ನಲ್ಲಿ ನಡೆಯುವ ಸಂವಾದಗಳು/ಚರ್ಚೆಗಳು ಎಂದು ಹೇಳಬಹುದು. ಕಳೆದ ಸುಮಾರು ಹತ್ತು–ಹದಿನೈದು ವರ್ಷಗಳಲ್ಲಿ ಇಂಟರ್ನೆಟ್ ವ್ಯಾಪಕತೆಯಿಂದಾಗಿ ಎಲ್ಲರಿಗೂ ಸಾರ್ವಜನಿಕ ಸ್ಪೇಸ್‌ನಲ್ಲಿ ನಡೆಯುವ ಚರ್ಚೆಗಳಲ್ಲಿ ಪಾಲ್ಗೊಳ್ಳುವ ಅಥವಾ ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳುವ ಅವಕಾಶ ದೊರೆತಿದೆ.

ನಾವು ಸೂಕ್ಷ್ಮವಾಗಿ ಗಮನಿಸಿದರೆ ಇಂತಹ ಸಾರ್ವಜನಿಕ ಸ್ಪೇಸ್‌ಗಳಲ್ಲಿ ನಡೆಯುವ ಸಂವಾದ/ಚರ್ಚೆಗಳಲ್ಲಿ ಕೆಲವು ಅಭಿಪ್ರಾಯಗಳು ಸಾರ್ವತ್ರಿಕವಾಗಿ ಒಪ್ಪಿತ ಎಂಬಂತೆ ಇರುತ್ತವೆ. ಅಂತಹ ಅಭಿಪ್ರಾಯಗಳನ್ನು ಒಪ್ಪದವರು ಅಥವಾ ವಿವಿಧ ವಿಷಯಗಳ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳುವವರು ಕೂಡ ತಮ್ಮ ಭಿನ್ನಮತವನ್ನು ಹೇಳಿದರೆ ಟೀಕೆಗೆ ಒಳಗಾಗುವ ಭಯವಿರುತ್ತದೆ. ಹೀಗೆ ಯಾರ ಟೀಕೆಗೂ ಒಳಗಾಗದಂತೆ, ಬಹುಜನರು ಹೇಳುವುದನ್ನೇ ಹೇಳುತ್ತಿರುತ್ತಾರೆ. ಅಥವಾ ಚುನಾವಣೆಯಲ್ಲಿ ಮತದಾರರ ವಿರೋಧ ಬರದಂತೆ ಮಾತನಾಡುವುದನ್ನು 'ರಾಜಕೀಯ ಸರಿತನ' (ಪೊಲಿಟಿಕಲ್ ಕರೆಕ್ಟ್ನೆಸ್) ಎನ್ನುತ್ತಾರೆ. ಉದಾಹರಣೆಗೆ, ಬಂಡವಾಳಶಾಹಿ ವ್ಯವಸ್ಥೆಯನ್ನು ಸಮರ್ಥಿಸಿ ಯಾವ ಮಂತ್ರಿಗಳೂ ಮಾತನಾಡುವುದಿಲ್ಲ. ಆದರೆ, ಬಂಡವಾಳ ಹೂಡಿ ಬೃಹತ್ ಉದ್ಯಮ



ಆರಂಭಿಸುವ ಬಂಡವಾಳಗಾರರಿಗೆ ಎಲ್ಲ ಪಕ್ಷಗಳ ಸರಕಾರಗಳೂ ಅತಿ ಕಡಿಮೆ ಬೆಲೆಯಲ್ಲಿ ಸರಕಾರಿ ಭೂಮಿಯನ್ನು ಅಥವಾ ಕೈಗಾರಿಕಾವಲಯಗಳಿಗಾಗಿ ರೈತರಿಂದ ಪಡೆದುಕೊಂಡ ಭೂಮಿಯನ್ನು ಕೊಡುತ್ತವೆ. ಆದರೆ, ಹೀಗೆ ರಿಯಾಯಿತಿಯಲ್ಲಿ ಕೊಡುವುದನ್ನು ತಾತ್ತ್ವಿಕವಾಗಿ, ಬಹಿರಂಗವಾಗಿ ಸಮರ್ಥಿಸಿಕೊಳ್ಳಲು ಅಂಥ ಪಕ್ಷದ ಮುಖಂಡರು ಹೋಗುವುದಿಲ್ಲ. ಯಾಕೆಂದರೆ, 'ಬಂಡವಾಳಶಾಹಿ ಎಂದರೆ ಕೆಟ್ಟದ್ದು', 'ಜನರನ್ನು ಶೋಷಿಸುವ ವ್ಯವಸ್ಥೆ' ಎಂಬುದಾಗಿ ಮಾರ್ಕ್ಸ್‌ವಾದಿಗಳು ಕಟ್ಟಿ ಹೇಳಿದ ಕಥನದ ಪ್ರಭಾವ ಈಗ ಕಡಿಮೆಯಾಗಿದ್ದರೂ ಅದು ಇನ್ನೂ ತನ್ನ ಪ್ರಭಾವವನ್ನು ಪೂರ್ತಿಯಾಗಿ ಕಳೆದುಕೊಂಡಿಲ್ಲ. ಹೀಗೆ ಕೆಲವು ಕಥನಗಳು ಹಲವಾರು ಪೀಳಿಗೆಗಳಿಗೆ ಮುಂದುವರಿಯುತ್ತದೆ.

> ಸಾಮಾನ್ಯ ಅರ್ಥದಲ್ಲಿ ಕಥನ ಎಂದರೆ ಸತ್ಯವಾದ ಘಟನೆಗಳ ನಿರೂಪಣೆ ಅಥವಾ ಕಾಲ್ಪನಿಕವಾಗಿ ಕಟ್ಟಲ್ಪಟ್ಟ ಕಥಾನಕ ಎಂಬ ವಿಶ್ಲೇಷಣೆಯೂ ಇದೆ. ಅಂದರೆ ಕಥನವು ವಾಸ್ತವದ ನೆಲೆಗಟ್ಟಿನಲ್ಲೂ ಕಟ್ಟಲ್ಪಡುತ್ತದೆ. ಕೆಲವೊಮ್ಮೆ ಅವಾಸ್ತವ ಅಥವಾ ಕಲ್ಪಿತ, ಪೂರ್ತಿ ಸತ್ಯವಲ್ಲದ ಸಂಗತಿಗಳಿಂದಲೂ ಕಥನಗಳು ಹುಟ್ಟಿಕೊಳ್ಳುತ್ತವೆ. ಆದರೆ, ಬೌದ್ಧಿಕ/ವೈಚಾರಿಕ ಚರ್ಚೆಗಳ ಸಂದರ್ಭದಲ್ಲಿ ಕಥನ (ನರೇಟಿವ್) ಎಂದರೆ ಕೇವಲ ಘಟನೆಗಳ ವಿವರಣೆ/ನಿರೂಪಣೆ ಅಥವಾ ಕಥೆ ಎಂಬುದಷ್ಟೇ ಅರ್ಥವಲ್ಲ. ಬದಲಾಗಿ ನಿರ್ದಿಷ್ಟ ವಿಷಯ/ಸನ್ನಿವೇಶ/ಘಟನೆ/ವಿದ್ಯಮಾನ ಮುಂತಾದವುಗಳಿಗೆ ಸಂಬಂಧಿಸಿದ ನಿರೂಪಣೆ/ಅಭಿಪ್ರಾಯಗಳು ಕೂಡ ಆಗಿರುತ್ತವೆ. ಅಂತಹ ನಿರೂಪಣೆಗಳು ಸತ್ಯ ಅಥವಾ ಅರ್ಧಸತ್ಯ ಇರಬಹುದು. ಪದೇಪದೇ ಹೇಳಿ ಸತ್ಯವಾಗಿಸಿದ ಸುಳ್ಳು ಕೂಡ ಇರಬಹುದು. ಉದಾಹರಣೆಗೆ: ಆರ್ಯ ಆಕ್ರಮಣವಾದ, ಆರೆಸ್ಸೆಸ್ ಎಂದರೆ ದಲಿತ ವಿರೋಧಿ – ಮನುವಾದಿ ಇತ್ಯಾದಿ ಸುಳ್ಳು ಕಥನಗಳನ್ನು ಹರಿಬಿಡಲಾಗಿದೆ. ಅನೇಕರು ಇದೇ ಸತ್ಯ ಎಂಬಂತೆ ಈ ಕಥನದ ಪ್ರಭಾವಕ್ಕೆ ಒಳಗಾಗಿದ್ದಾರೆ.

ಕಥನಗಳು ಇತಿಹಾಸದ ಬಗ್ಗೆ ಅಥವಾ ವರ್ತಮಾನದ ಬಗ್ಗೆ ಇರಬಹುದು; ಅಥವಾ ಮೇಲಿನ ಬಂಡವಾಳಶಾಹಿಯ ಉದಾಹರಣೆಯಂತೆ ಆರ್ಥಿಕ ವ್ಯವಸ್ಥೆ ಮುಂತಾದ ಸಂಗತಿಗಳ ಬಗ್ಗೆಯೂ ಇರಬಹುದು. ಇತಿಹಾಸದ ಒಂದು ಉದಾಹರಣೆ ನೋಡುವುದಾದರೆ: ಟಿಪ್ಪುವನ್ನು ವೈಭವೀಕರಿಸಿ ಹೊಗಳುವ ಇತಿಹಾಸಕಾರರೂ ಇದ್ದಾರೆ. ಸ್ವಲ್ಪ ಸಮತೋಲನದ ದೃಷ್ಟಿಯಿಂದ ಬರೆಯುವ ಮುಂಚೂಣಿ ಇತಿಹಾಸಕಾರರು ಕಟ್ಟಿರುವ ಕಥನ ಏನು? "ಆತನು ಸರ್ವ ಜನಾನುರಾಗಿಯಾಗಿದ್ದನು ಎಂಬುದಕ್ಕೆ ಮತ್ತು ಹಿಂದುಗಳಿಗೆ, ದೇವಾಲಯಗಳಿಗೆ ಉಪಕಾರ ಮಾಡಿದುದಕ್ಕೆ ದಾಖಲೆಗಳಿವೆ; ಅದೇರೀತಿ ಹಿಂದುಗಳ ಮೇಲಿನ ದೌರ್ಜನ್ಯ ಮಾಡಿದ್ದಕ್ಕೂ ದಾಖಲೆಗಳಿವೆ. ಹೀಗೆ ಟಿಪ್ಪುವಿನ ಬಗ್ಗೆ ಒಳ್ಳೆಯ ಮತ್ತು ಕೆಟ್ಟ ಸಂಗತಿಗಳು ದಾಖಲಾಗಿರುವುದರಿಂದ ಆತನನ್ನು ಮತಾಂಧ ಎಂದು ಹೇಳಲಾಗದು. ಆಡಳಿತ ನಡೆಸುವಾಗ ಶತ್ರುಗಳ ಮೇಲೆ ದೌರ್ಜನ್ಯ ಮಾಡುವುದು ಸಹಜ. ಇತಿಹಾಸ ಸಂಕೀರ್ಣವಾಗಿರುತ್ತದೆ" ಇತ್ಯಾದಿ. ಈ ಕಥನವು ಅರ್ಧಸತ್ಯ ಅಥವಾ ಅದಕ್ಕಿಂತಲೂ ಕಡಿಮೆ ಸತ್ಯ. ಯಾಕೆಂದರೆ ಟಿಪ್ಪು ದೇವಾಲಯಗಳಿಗೆ ಉಡುಗೊರೆ, ದಾನ ನೀಡಿದ್ದೇನೋ ಹೌದು. ಆದರೆ ಇದಕ್ಕೆ ಹೋಲಿಸಿದರೆ ಆತ ನಡೆಸಿದ ಹಿಂದೂ ನರಮೇಧ, ದೌರ್ಜನ್ಯಗಳು ಹಲವಾರು ಪಟ್ಟು ದೊಡ್ಡದು.

'ಭಾರತದಲ್ಲಿ ದ್ವಿರಾಷ್ಟ್ರ ಸಿದ್ಧಾಂತವನ್ನು ಮೊದಲು ಮುಂದಿಟ್ಟವರು ಸಾವರ್ಕರ್' ಎಂಬ ಸುಳ್ಳು ಕಥನವೇ ಇಂದಿಗೂ ಪ್ರಚಲಿತವಾಗಿರುವುದು. ವರ್ತಮಾನ ಕಾಲದ ಉದಾಹರಣೆ ನೀಡುವುದಾದರೆ: 'CAA ಕಾಯ್ದೆ ಬಂದರೆ ಮುಸಲ್ಮಾನರ ಪೌರತ್ವ ರದ್ದಾಗುತ್ತದೆ, ಇದರಿಂದ ಮುಸ್ಲಿಂ ಸಮುದಾಯ ಅಸುರಕ್ಷಿತವಾಗುತ್ತದೆ' ಎಂಬ ಕಲ್ಪಿತ ಕಥನವನ್ನು ಕಟ್ಟಲಾಯಿತು. ಪರಿಣಾಮವಾಗಿ ಅನೇಕ ಮಂದಿ ಈ ಸುಳ್ಳು ಕಥನವನ್ನು ನಂಬಿ CAA ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳಿಗೆ ದನಿಗೂಡಿಸಿದ್ದರು.


ಸಿದ್ಧಮಾದರಿಯ ನರೇಟಿವ್‌ಗಳೇ ನಾವು ಎಷ್ಟೋ ವಿಷಯಗಳ ಆಳಕ್ಕೆ ಇಳಿಯದಂತೆ ನಮ್ಮನ್ನು ತಡೆಯುತ್ತವೆ. ಉದಾಹರಣೆಗೆ 'ಜಗತ್ತಿನ ಎಲ್ಲ ಮತಗಳೂ ಸಮಾನ' (All religions are equal)–ಎಂಬ ಹೇಳಿಕೆ ಜನಪ್ರಿಯಗೊಂಡು ಕಾಲಾಂತರದಲ್ಲಿ ನರೇಟಿವ್‌ಗಳೇ ಆಗಿವೆ.

ಅರ್ಧಸತ್ಯ ಅಥವಾ ಸುಳ್ಳು ನರೇಟಿವ್‌ಗಳನ್ನು ಬಯಲು ಮಾಡುವುದು (Exposing False/Wrong Narratives) ಅಗತ್ಯದ ಕೆಲಸ. ಯಾಕೆಂದರೆ ಇಂತಹ ನರೇಟಿವ್‌ಗಳೇ ಸರಕಾರಗಳ ನೀತಿನಿರೂಪಣೆಗೆ, ನ್ಯಾಯಾಲಯದ ತೀರ್ಪುಗಳಿಗೆ, ಮಾಧ್ಯಮದ ನಿಲುವುಗಳಿಗೆ ಕಾರಣವಾಗುತ್ತವೆ. ಉದಾಹರಣೆಗೆ "ಬಹುಸಂಖ್ಯಾತರಿಂದ ಅಲ್ಪಸಂಖ್ಯಾತರಿಗೆ ತೊಂದರೆಯಾಗಬಹುದು" ಎನ್ನುವ ಸುಳ್ಳು ಕಥನವೇ 'ಅಲ್ಪಸಂಖ್ಯಾತರಿಗೆ ಇನ್ನಷ್ಟು ಹಕ್ಕುಗಳನ್ನು ನೀಡಬೇಕು' ಎಂಬ ನೀತಿಗೆ (ಪಾಲಿಸಿಗೆ) ಕಾರಣವಾಯಿತು. 'ರಾಷ್ಟ್ರವಾದ ಎನ್ನುವುದು ಋಣಾತ್ಮಕ' ಮತ್ತು 'ಹಿಂದೂರಾಷ್ಟ್ರದ ಕಲ್ಪನೆ ಅಪಾಯಕಾರಿಯಾದುದು' ಎಂಬ ಕಥನವನ್ನು ಎಡಪಂಥೀಯ ಬೌದ್ಧಿಕ ವಲಯ ಇಂದಿಗೂ ಚಾಲ್ತಿಯಲ್ಲಿ ಇಟ್ಟಿರುವುದು ನಮಗೆಲ್ಲ ಗೊತ್ತಿದೆ.

ಸತ್ಯಮೇವ ಜಯತೇ, ಸರ್ವೇ ಭವಂತು ಸುಖಿನಃ, ಭಾರತ್ ಮಾತಾ ಕೀ ಜಯ್, ವಸುಧೈವ ಕುಟುಂಬಕಂ, ದೇವನೊಬ್ಬ ನಾಮ ಹಲವು, ಕಾಯಕವೇ ಕೈಲಾಸ – ಈ ರೀತಿಯ ಅಸಂಖ್ಯ ನರೇಟಿವ್ ನಮ್ಮ ದೇಶದ್ದು. ಅವು ತಕ್ಷಣ ನಮಗೆ ಕಾಣುವುದಿಲ್ಲ; ಯಾಕೆಂದರೆ, ಸತ್ಯವಾದುದನ್ನು ನಾವು ಸಾಮಾನ್ಯವಾಗಿ ನರೇಟಿವ್ ಎಂದು ಪ್ರತ್ಯೇಕವಾಗಿ ಗುರುತಿಸುವುದಿಲ್ಲ.

ಸುಳ್ಳು ಕಥನಗಳನ್ನು ಬಯಲು ಮಾಡಿ ಪ್ರತಿಕಥನಗಳನ್ನು ಕಟ್ಟಬೇಕು ನಿಜ. ಅದರೆ ಆ ಅವಸರದಲ್ಲಿ ಪ್ರತಿಸುಳ್ಳನ್ನು ಕಥನವಾಗಿ ಕಟ್ಟಬಾರದು ಎನ್ನುವ ಎಚ್ಚರ ನಮಗಿರಬೇಕು. ಎಲ್ಲಾ ಭಾರತೀಯ ಕಥನಗಳು ಸತ್ಯದ ಆಧಾರದಲ್ಲಿ ಮೂಡಿಬಂದಿದೆ ಎಂಬುದರ ಕುರಿತು ಪರಿಜ್ಞಾನವಿರಬೇಕು. ಆದರೆ ಯುಕ್ತವಾದ ಮತ್ತು ಅಗತ್ಯವಾದ ಸಂಗತಿಗಳನ್ನು ಹತ್ತು ಕಡೆ ಹೇಳಿ, ಬರೆದು ಕಥನಗಳಾಗಿ ಸ್ಥಾಪನೆಗೊಳ್ಳುವಂತೆ ಮಾಡುವುದು ಕೂಡ ಮುಖ್ಯ. ಉದಾಹರಣೆಗೆ: 'ಸೃಷ್ಟಿಕರ್ತ' ಎಂಬ ನೆಲೆಯಲ್ಲಿ ದೇವರನ್ನು ಆರಾಧಿಸುವಂತೆಯೇ, 'ಸಮಸ್ತ ಸೃಷ್ಟಿಯೇ ಪೂಜ್ಯ' ಎನ್ನುವ ರೀತಿಯ ಹಿಂದುತ್ವದ ಹಲವು ಗುಣಲಕ್ಷಣಗಳು ಹೇಗೆ ಭಾರತೀಯ ಮೂಲದ ಎಲ್ಲ ಜಾತಿ, ಸಮುದಾಯ, ಸಂಪ್ರದಾಯಗಳಲ್ಲಿ ಇವೆ ಎಂಬುದನ್ನು ನಾವು ಒತ್ತಿ, ಎತ್ತಿ ಹೇಳಬೇಕು. ಅವುಗಳು ಹೇಗೆ ಇಂದು ಜಗತ್ತಿಗೇ ಬೇಕಾದ ಗುಣಗಳು ಎಂದು ಹೇಳಬೇಕು. ಆ ಮೂಲಕ ಯಾವುದು ಹಿಂದುತ್ವ ಎಂದು ತೋರಿಸುವಂತೆಯೇ ಯಾವ ಲಕ್ಷಣಗಳು ಹಿಂದುತ್ವ ಅಲ್ಲ ಎಂದೂ ತೋರಿಸಬೇಕು; ಮತ್ತು ಅಂತಹ ಸೆಮೆಟಿಕ್ ರಿಲಿಜನ್ನುಗಳ ಲಕ್ಷಣಗಳು ಹೇಗೆ ಭಾರತದಲ್ಲಷ್ಟೇ ಅಲ್ಲ ಜಗತ್ತಿನಲ್ಲಿ ಸಹಬಾಳ್ವೆಗೆ, ಸಾಮರಸ್ಯಕ್ಕೆ ಹಾಗೂ ಬಹುತ್ವಕ್ಕೆ ಹೇಗೆ ಮಾರಕ ಎನ್ನುವುದನ್ನೂ ಪರೋಕ್ಷವಾಗಿ ಬಿಂಬಿಸಬೇಕು. 'ಬಹುತ್ವ ಉಳಿಯಲು ಹಿಂದುತ್ವ ಬೇಕು' ಎಂಬ ಕಥನ ಗಟ್ಟಿಗೊಳ್ಳಬೇಕಾಗಿದೆ. ಹಿಂದುತ್ವದ ರಾಜಕಾರಣ ಎಂದರೇನು? ಬೇರೇನಲ್ಲ; ಹಿಂದುತ್ವದ ಸಲ್ಲಕ್ಷಣಗಳನ್ನು/ಬಹುತ್ವವನ್ನು ಉಳಿಸಿಕೊಳ್ಳಬೇಕೆಂಬ ರಾಜಕಾರಣ. ನಮ್ಮ ಕಲ್ಪನೆಯ ಹಿಂದೂರಾಷ್ಟ್ರ ಎಂದರೆ 'ಹಿಂದುತ್ವದ ಗುಣಗಳನ್ನು ಉಳಿಸಿಕೊಳ್ಳುವ ರಾಷ್ಟ್ರ' ಎಂದರ್ಥ.

## ಸಂಸ್ಮರಣೆ
# ಲಾಲಾ ಲಜಪತ್ ರಾಯ್ (28 ಜನವರಿ 1865 – 27 ನವೆಂಬರ್, 1928)



ಭಾರತದ ಸ್ವಾತಂತ್ರ್ಯ ಸಂಗ್ರಾಮ ಹಲವಾರು ಧೀರರನ್ನು ಪರಿಚಯಿಸಿದೆ. ಕೆಚ್ಚೆದೆಯ ಹೋರಾಟದ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದೆ. ಅಂತಹ ಹೋರಾಟಗಾರರಲ್ಲಿ ಲಾಲಾಲಜಪತ್ ರಾಯ್ ಕೂಡಾ ಒಬ್ಬರು.

ಲಾಲಾ ಲಜಪತ್ ರಾಯ್ ಅವರು 28 ಜನವರಿ 1865ರಂದು ಭಾರತದ ಪಂಜಾಬ್‌ನ ಲುಧಿಯಾನದ ಧುಡಿಕೆಯಲ್ಲಿ ಜನಿಸಿದರು. ಕ್ರಾಂತಿಕಾರಿ, ರಾಜಕಾರಣಿ, ಬರಹಗಾರ, ಹಿಂದೂ ಪ್ರಾಬಲ್ಯ ಚಳುವಳಿಯ ನಾಯಕ ಮತ್ತು ಪ್ರಖರ ವಾಗ್ಮಿಯಾಗಿ ಗುರುತಿಸಿಕೊಂಡ ಸ್ಫೂರ್ತಿದಾಯಕ ನಾಯಕ ಲಾಲಾ ಲಜಪತ ರಾಯ್. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ 'ಲಾಲ್–ಬಾಲ್–ಪಾಲ್' ಎಂಬ ಮೂವರು ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲಿ ರಾಯ್ ಕೂಡ ಒಬ್ಬರು. ರಾಯ್ ಅವರು ತಮ್ಮ ಬಲವಾದ ನಿರ್ಣಯ, ಸ್ಪಷ್ಟ ನಿಲುವು ಮತ್ತು ಧೈರ್ಯದ ಮೂಲಕ ಬ್ರಿಟಿಷರ ವಿರುದ್ಧ ಹೋರಾಟವನ್ನು ನಡೆಸಿದರು. ಲಾಲಾ ಲಜಪತ್ ರಾಯ್ ಅವರ ಕ್ರಾಂತಿಕಾರಿ ನಡೆ ಅವರನ್ನು 'ಪಂಜಾಬ್‌ನ ಸಿಂಹ' ಎಂಬ ಅಭಿದಾನ ಸಿಗುವಂತೆ ಮಾಡಿತು.

ಲಜಪತ್ ರಾಯ್ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ದೇಶಕ್ಕಾಗಿ ಸವೆದ ಜೀವ ಅವರದು. ಭಾರತ ಸ್ವಾತಂತ್ರ್ಯವನ್ನು ಪಡೆಯುವಲ್ಲಿ ರಾಯ್ ಅವರ ಕೊಡುಗೆ ಅಗಾಧವಾದುದು. ಅವರು ಸ್ವದೇಶಿ ಚಳುವಳಿಗಾಗಿ ಸಕ್ರಿಯವಾಗಿ ಪ್ರಚಾರ ಮಾಡಿದ ಮಹಾನ್ ನಾಯಕರಾಗಿದ್ದರು. 1917ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಇಂಡಿಯನ್ ಹೋಮ್ ರೂಲ್ ಲೀಗ್ ಆಫ್ ಅಮೇರಿಕಾವನ್ನು ಸ್ಥಾಪಿಸಿದರು. 1920ರವರೆಗೆ ಅಮೇರಿಕಾದಲ್ಲಿದ್ದು, ನಂತರ ಭಾರತಕ್ಕೆ ಮರಳಿದರು. ಅದೇ ವರ್ಷ ಕಲ್ಕತ್ತಾದಲ್ಲಿ ಕಾಂಗ್ರೆಸ್‌ನ ವಿಶೇಷ ಅಧಿವೇಶನದ ಅಧ್ಯಕ್ಷರಾದರು. ಮಹಾತ್ಮ ಗಾಂಧಿಯವರು 1920ರಲ್ಲಿ ಪ್ರಾರಂಭಿಸಿದ ಅಸಹಕಾರ ಚಳುವಳಿಯನ್ನು ಲಾಲಾ ಲಜಪತ್ ರಾಯ್ ಪಂಜಾಬ್‌ನಲ್ಲಿ ಮುಂದುವರೆಸಿದರು.

1928ರಲ್ಲಿ ಸೈಮನ್ ಕಮಿಷನ್' ವಿರುದ್ಧ ಭಾರತೀಯ ವೀರರು ಪ್ರತಿಭಟಿಸುತ್ತಿರುವಾಗ ಬ್ರಿಟಿಷರು ರಾಯ್ ಅವರ ಮೇಲೆ ತೀವ್ರವಾಗಿ ಹಲ್ಲೆ ಮಾಡಿದ ಪರಿಣಾಮ ಗಾಯಕ್ಕೊಳಗಾಗಿದ್ದರು. ನೋವಿನಲ್ಲಿ ರಾಯ್ ಅವರು 'ಇಂದು ನನಗೆ ಹೊಡೆದ ಹೊಡೆತಗಳು ಭಾರತದಲ್ಲಿ ಬ್ರಿಟಿಷರ ಶವಪೆಟ್ಟಿಗೆಗೆ ಕೊನೆಯ ಮೊಳೆಗಳಾಗಿರುತ್ತವೆ ಎಂದು ನಾನು ಘೋಷಿಸುತ್ತೇನೆ' ಎಂದು ನುಡಿದಿದ್ದರು. ಮಾಹಾನ್ ಪುರುಷ ಲಾಲಾ ಲಜಪತ ರಾಯ್ ಅವರು 27 ನವೆಂಬರ್, 1928 ರಂದು ಕೊನೆಯುಸಿರೆಳೆದರು. ರಾಯ್ ಅವರ ಪುಣ್ಯತಿಥಿಯಂದು ಒಡಿಶಾದ ಜನರು ಹುತಾತ್ಮರ ದಿನ ಎಂದು ಆಚರಣೆ ಮಾಡುತ್ತಾರೆ.

ರಾಯ್ ಒಬ್ಬ ಹೋರಾಟಗಾರರಲ್ಲದೇ ಶ್ರೇಷ್ಠ ಬರಹಗಾರರಾಗಿದ್ದರು. ಇವರು 'ದಿ ಸ್ಟೋರಿ ಆಫ್ ಮೈ ಡಿಪೋರ್ಟೇಶನ್, ಆರ್ಯ ಸಮಾಜ, ಯುನೈಟೆಡ್ ಸ್ಟೇಟ್ಸ್ ಅಮೆರಿಕಾ ಎ ಹಿಂದೂಸ್ ಸೇರಿದಂತೆ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಇದಲ್ಲದೆ ಮಜ್ಜಿನಿ, ಗ್ಯಾರಿಬಾಲ್ಡಿ, ಶಿವಾಜಿ ಮತ್ತು ಕೃಷ್ಣ ಅವರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಅಪ್ರತಿಮ ಹೋರಾಟ, ಪ್ರಖರ ಬರಹ ಹಾಗೂ ಸಜ್ಜನ ವ್ಯಕ್ತಿತ್ವದ ಪರಿಣಾಮವಾಗಿ ಲಾಲಲಜಪತ್ ರಾಯ್ ಅವರು ಇಂದಿಗೂ ನಮ್ಮ ನಡುವೆ ಜೀವಂತವಾಗಿದ್ದಾರೆ.

# ಭರವಸೆಗಳನ್ನು ಸೃಷ್ಟಿಸಿದ ಸೇವಾಭಾರತಿ

ದೇಶದ ರಾಜಧಾನಿ ದೆಹಲಿಯ 'ಯಮುನಾ ಖಾದರ್' ಎಂಬ ಪ್ರದೇಶದ ಜನರು ವಿದ್ಯುತ್ ಮತ್ತು ನೀರಿನಂತಹ ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿದ್ದರು. ಇಂದಿಗೂ ನಗರದಿಂದ ದೂರ ಪ್ರತ್ಯೇಕವಾಗಿ ಒಂದು ದ್ವೀಪದಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಇಲ್ಲಿ ಕುಡಿಯುವ ನೀರನ್ನು 5 ಕಿ.ಮೀ. ದೂರದಲ್ಲಿರುವ ಓಖ್ಲಾದಿಂದ ಕಂಟೈನರ್‌ಗಳಲ್ಲಿ ತರಲಾಗುತ್ತದೆ. ಮಕ್ಕಳು ಶಾಲೆಗಳಿಗೆ ದೋಣಿಗಳಲ್ಲಿ ಕುಳಿತು ತೆರಳುತ್ತಾರೆ. ಮೀನು ಮತ್ತು ತರಕಾರಿಗಳನ್ನು ಮಾರುವ ಈ ಕಾರ್ಮಿಕರಿಗೆ, ದೆಹಲಿಯ ಪೂರ್ಣ ಲಾಕ್ಡೌನ್ ಹಸಿವನ್ನು ತಂದೊಡ್ಡಿತು.



ಸೇವಾಭಾರತಿಯ ಸ್ವಯಂಸೇವಕರ ತಂಡ ಸಹಾಯ ಮಾಡಲು ದೋಣಿಯಲ್ಲಿ ಯಮುನಾ ಖಾದರ್ ತಲುಪಿದಾಗ ಅಲ್ಲಿದ್ದ ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರ ತನಕ ಸುಮಾರು 60–65 ಜನರು ತಮಗಾಗಿ ಏನನ್ನಾದರು ಪಡೆಯುವ ಭರವಸೆಯ ಕಂಗಳಿಂದ ನೋಡುತ್ತಾ ನಿಂತಿದ್ದರು.

ಯಾವಾಗ 5–6 ಹೊಲಿಗೆ ಯಂತ್ರಗಳು ದೋಣಿಯನ್ನೇರಿ ಬಂದವೋ ಹಾಗೂ ದೆಹಲಿ ಸೇವಾಭಾರತಿಯ ಸ್ವಯಂಸೇವಕರು ತಮ್ಮ ಕೈಯಾರೆ ಅಲ್ಲಿಯ ಮಹಿಳೆಯರಿಗೆ ಮಾಸ್ಕ್ ಹೊಲಿಯುವುದನ್ನು ಕಲಿಸಿದರೋ ಆಗ ಅಲ್ಲಿ ಅದ್ಭುತವೊಂದಕ್ಕೆ ಮುನ್ನುಡಿ ಬರೆಯಲಾಯಿತು. ಸ್ವಯಂಸೇವಕರ ಸಹಾಯದಿಂದ ಆತ್ಮನಿರ್ಭರತೆಯ ಕಲೆಯನ್ನು ಮೈಗೂಡಿಸಿಕೊಂಡು ಮಣ್ಣು ಮತ್ತು ಸೆಗಣಿಯಿಂದ ಮಾಡಲ್ಪಟ್ಟ ಪರಿಸರಸ್ನೇಹಿ ಗಣಪತಿಯ ಮೂರ್ತಿಗಳಿಗೆ ಬಣ್ಣಗಳಿಂದ ಸಿಂಗರಿಸಿದರು. ಭಿಕ್ಷೆ ಬೇಡುತ್ತಿದ್ದ ಕೈಗಳು ಈಗ ಪ್ರತೀದಿನ 200–300 ರೂಪಾಯಿ ಹಣವನ್ನು ಸಂಪಾದಿಸುತ್ತಿವೆ. ಅಂದು ಭಿಕ್ಷೆ ಬೇಡಿ ಜೀವನ ನಡೆಸುತ್ತಿದ್ದ 57 ಮಹಿಳೆಯರು ಈಗ ವೋಕಲ್ ಟು ಲೋಕಲ್ ಕ್ಯಾಂಪ್‌ನಲ್ಲಿ ಕರ್ವಾಚೌತ್‌ನ ತಟ್ಟೆಗಳನ್ನು ಅಲಂಕರಿಸುತ್ತಿದ್ದಾರೆ.

ಇವರು ಹಿಂದೂಗಳು ಆದರೆ ಭಾರತೀಯರೆಂದು ಗುರುತಿಸಿಕೊಳ್ಳಲಾಗುತ್ತಿರಲಿಲ್ಲ. ಯಮುನಾ ನದಿಯ ತೀರದ ಕಾಡುಗಳಲ್ಲಿ ಪಾಕಿಸ್ತಾನದಿಂದ ಬಂದಿದ್ದ ನಿರಾಶ್ರಿತರ ಶಿಬಿರಗಳಿಗೆ ಹೋಗಿ ನೋಡಿದರೆ ಸಾಕು ಅವರ ಕಷ್ಟಗಳನ್ನು ಗುರುತಿಸಬಹುದಾಗಿತ್ತು. ಸೇವಾ ಭಾರತಿಯ ಮಾತೃ ಮಂಡಳಿಯ ಗುಂಪು ದಿನಸಿಯ ಕಿಟ್‌ಗಳನ್ನು ತೆಗೆದುಕೊಂಡು ಅಲ್ಲಿಗೆ ಹೋದಾಗ ಆ ಶಿಬಿರಗಳಲ್ಲಿ ಸುಮಾರು 20–25 ಜನ ಗರ್ಭಿಣಿ ಸ್ತ್ರೀಯರಿದ್ದದ್ದು ತಿಳಿಯಿತು. ಆಸ್ಪತ್ರೆಯ ಓ.ಪಿ.ಡಿ.ಗಳು ಮುಚ್ಚಿದ್ದವು. ತುರ್ತು ಸೇವೆಗಳು ಅಲ್ಪಸ್ವಲ್ಪ ಕಾರ್ಯ ನಿರ್ವಹಿಸುತ್ತಿದ್ದವು. ಸಾಧಾರಣವಾದ ಊಟಕ್ಕೂ ತೊಂದರೆಯಿತ್ತು, ಇನ್ನು ಗರ್ಭಿಣಿ ಮಹಿಳೆಯರಿಗೆ ಪೌಷ್ಟಿಕ ಅಹಾರ ದೊರೆಯುವುದಂತೂ ದೂರದ ಮಾತಾಗಿತ್ತು. ಇಂತಹ ಮಹಿಳೆಯರಿಗಾಗಿ ವಿಶೇಷವಾಗಿ ಒಂದು ಪೌಷ್ಟಿಕ ಅಹಾರಗಳ ಕಿಟ್‌ಗಳನ್ನು ತಯಾರಿಸಿದರು. ಈಗ ಸೇವಾಭಾರತಿಯ ವ್ಯಾನ್ ಪ್ರತೀ 15 ದಿನಕ್ಕೊಮ್ಮೆ ಡಾಕ್ಟರೊಂದಿಗೆ ಅಲ್ಲಿಗೆ ಹೋಗುತ್ತಿದ್ದು ಅಲ್ಲಿಯ ಜನರನ್ನು ಉಪಚರಿಸಿ, ಉಚಿತವಾಗಿ ಔಷಧಿಗಳನ್ನು ನೀಡಲಾಗುತ್ತಿದೆ.


ಕೇವಲ ದೆಹಲಿಯೊಂದರಲ್ಲೆ 12500ಕ್ಕಿಂತಲೂ ಹೆಚ್ಚು ಸ್ವಯಂಸೇವಕರು ಮತ್ತು ಸೇವಾಭಾರತಿಯ ಕಾರ್ಯಕರ್ತರು ಸೇರಿ 1,91,000 ದಿನಸಿ ಕಿಟ್‌ಗಳನ್ನು ಮತ್ತು 91 ಲಕ್ಷ ಜನರಿಗೆ ಊಟದ ಪೊಟ್ಟಣಗಳನ್ನು ವಿತರಿಸಿದರು. ವೇಶ್ಯಾವೃತ್ತಿಯ ಜಾಲದಲ್ಲಿ ಸಿಲುಕಿರುವ ದೆಹಲಿಯ ಜಿಬಿ ರಸ್ತೆಯ ರೆಡ್ ಲೈಟ್ ಪ್ರದೇಶದ 986 ಮಹಿಳೆಯರಿಗೆ ದಿನಸಿ ಕಿಟ್ಗಳನ್ನು ವಿತರಿಸಲಾಯಿತು. ಕೊರೋನ ಸಾಂಕ್ರಾಮಿಕ ಕಾಲದಲ್ಲಿ ಆಹಾರಕ್ಕಾಗಿ ಪರಿತಪಿಸುತ್ತಿದ್ದ ಈ ಮಹಿಳೆಯರನ್ನು ಸ್ವಯಂಸೇವಕರು ಗೌರವದಿಂದ ಸಂಬೋಧಿಸುತ್ತಿದ್ದುದನ್ನು ಕೇಳಿ ಅವರೆಲ್ಲರೂ ಭಾವುಕರಾದರು. ಹಾಗೆಯೇ ಮಯೂರ್ ವಿಹಾರ್ ಕಾಲೋನಿಯಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿರುವ ಮಂಗಳಮುಖಿ ಸಮಾಜವು ಸ್ವಯಂಸೇವಕ ಕಾರ್ಯಕರ್ತರೊಂದಿಗೆ ಗೌರವಯುತವಾಗಿ ನಡೆದುಕೊಂಡಿದ್ದಲ್ಲದೇ ಅವರನ್ನು ಹರಸಿ ಹಾರೈಸಿ ದಿನಸಿ ಕಿಟ್'ಗಳ ವಿತರಣೆ ಮಾಡಿದ್ದಕ್ಕಾಗಿ ಧನ್ಯವಾದಗಳನ್ನೂ ವ್ಯಕ್ತಪಡಿಸಿತು.

## ಪುಸ್ತಕ ಪರಿಚಯ

# ಮಾಗಧ

**ಲೇಖಕರು:** ಸಹನಾ ವಿಜಯಕುಮಾರ್
**ಬೆಲೆ:** ರೂ. 915
**ಪ್ರಕಾಶನ:** ಸಾಹಿತ್ಯ ಭಂಡಾರ

ಕನ್ನಡದಲ್ಲಿ ಐತಿಹಾಸಿಕ ಕಾದಂಬರಿಗಳಿಗೆ ಶತಮಾನಕ್ಕೂ ಮಿಗಿಲಾದ ಇವಿಹಾಸವಿದೆ. ಆದರೆ ನವೋದಯದ ಬಳಿಕ ನವ್ಯ, ಬಂಡಾಯ ಮುಂತಾದ ಚಳವಳಿಗಳ ಯುಗದಲ್ಲಿ ಈ ಪ್ರಕಾರವು ಲೇಖಕರನ್ನು ಹೆಚ್ಚು ಸೆಳೆದಂತೆ ತೋರದು. ಈಚಿನ ಇಪ್ಪತ್ತು ಇಪ್ಪತ್ತೈದು ವರ್ಷಗಳಲ್ಲಿ ಡಾ.ಎಸ್. ಎಲ್. ಭೈರಪ್ಪನವರ ಸಾರ್ಥ, ಆವರಣ ಮುಂತಾದ ಕೃತಿಗಳ ಬಳಿಕ ಐತಿಹಾಸಿಕ ಕಾದಂಬರಿಗಳ ರಚನೆ ಮತ್ತೆ ಮುನ್ನೆಲೆಗೆ ಬಂದಂತೆ ತೋರುತ್ತದೆ. ಈ ಹಂತದಲ್ಲಿ ಅಧ್ಯಯನ, ಕ್ಷೇತ್ರಕಾರ್ಯ, ವಸ್ತುನಿಷ್ಠೆ, ಚಿತ್ತವೃತ್ತಿಗಳ ಸಂಕೀರ್ಣತೆ, ಕಪ್ಪು ಬಿಳುಪಲ್ಲದ ಪಾತ್ರಗಳ ನಿರ್ಮಾಣ, ಜಗಿಯಾದರೂ ಭಾವುಕವಾಗದ ಭಾಷೆ ಮುಂತಾದ ಲಕ್ಷಣಗಳುಳ್ಳ ಹಲಕೆಲವು ಕಾದಂಬರಿಗಳು ಗಮನಾರ್ಹವಾಗಿ ಹೊರಬಂದಿವೆ.




ಈ ಸಾಲಿಗೆ ಶ್ರೀಮತಿ ಸಹನಾ ವಿಜಯಕುಮಾರ್ ಅವರ 'ಮಾಗಧ'ವೂ ಸೇರುತ್ತದೆ. ಇದು ಪ್ರಿಯದರ್ಶಿ ಅಶೋಕನ ಬಾಳಿನ ನಿರ್ಣಾಯಕ ಘಟ್ಟವನ್ನು ಆಧರಿಸಿ ನಾಲ್ಕು ನೆಲೆಗಳಲ್ಲಿ ರೂಪುಗೊಂಡಿದೆ. ಮುಖ್ಯವಾಗಿ ಅಶೋಕನ ಧರ್ಮಶಾಸನಗಳನ್ನು ಆಧರಿಸಿಯೇ ಇದು ಸಾಗುವ ಕಾರಣ ಅಧಿಕೃತತೆಗೆ ಅವಧಾರಣೆ ಹಾಕಿದೆ. ಅಲ್ಲದೆ ಅರ್ಥಶಾಸ್ತ್ರದ ಅರ್ಥಪೂರ್ಣ ಅವಲಂಬನವೂ ಇದಕ್ಕಿದೆ. ಬರೀ ರಾಜಕೀಯವಾಗಲಿ, ಮತಮಥನವಾಗಲಿ 'ಮಾಗಧ'ದ ತಿರುಳನು ಆಕ್ರಮಿಸಿಲ್ಲ. ಹಾಗೆಂದು ಕೇವಲ ಸಾಮಾಜಿಕ ಕಾದಂಬರಿಗಳಂತೆ ಮಾನುಷ ಭಾವಗಳ ಮೇಲಾಟಕ್ಕೂ ಇದು ಸೀಮಿತವಾಗಿಲ್ಲ. ಇಲ್ಲಿರುವುದು ಭಾರತೀಯ ಇತಿಹಾಸದ ಬಹುಚರ್ಚಿತ ಘಟ್ಟವೊಂದರ, ಬಹುಮಾನಿತ ಸಾಮ್ರಾಟನೊಬ್ಬನ ಒಳಹೊರಗುಗಳನ್ನು ಹತ್ತಾರು ಕೋನಗಳಿಂದ ಕಂಡು, ಕಾಣಿಸುವ ಕಲಾತ್ಮಕ ಕಥನ, ತಾತ್ವಿಕ ಶೋಧನ. ಸುದೀರ್ಘವಾದ ಈ ಕಾದಂಬರಿಯಲ್ಲಿ ನಮ್ಮನ್ನು ಅವರಿಸಿಕೊಳ್ಳುವ ಹಲವು ಪಾತ್ರಗಳು ಸಹನಾ ಅವರದೇ ಕೃಷಿ. ಈ ಮೂಲಕ ಅವರ ಸತ್ಯವಿಮುಖವಲ್ಲದ ಸೌಂದರ್ಯಸಿದ್ಧಿ ಮೆಚ್ಚುವಂತಿದೆ.

ಪುಸ್ತಕಕ್ಕಾಗಿ ಸಂಪರ್ಕಿಸಿ: 6360581957

# ವಾಣಿ ವಿವೇಕ ರೂಢಿಸಿಕೊಳ್ಳುವುದು

ಎಲ್ಲಿ, ಯಾವಾಗ, ಹೇಗೆ ಮಾತನಾಡಬೇಕು ಎನ್ನುವ ಪರಿಜ್ಞಾನಕ್ಕೆ ವಾಣಿವಿವೇಕ ಎನ್ನುತ್ತಾರೆ. ಸಮಾಜದ ಭಾಗವೇ ಆಗಿರುವ ನಾವು ಅನೇಕ ಸಂದರ್ಭಗಳಲ್ಲಿ ಅನೇಕ ಕಾರಣಗಳಿಗಾಗಿ ಹಲವರನ್ನು ಎದುರುಗೊಳ್ಳುತ್ತೇವೆ. ಮನೆ, ಶಾಲೆ – ಕಾಲೇಜು, ನಾವು ಕೆಲಸ ಮಾಡುವ ಸ್ಥಳ, ದೇವಾಲಯ, ಬಸ್ಸು, ರೈಲು, ವಿಮಾನ ನಿಲ್ದಾಣ, ಸರ್ಕಾರಿ ಕಛೇರಿಗಳು, ಸಾರ್ವಜನಿಕ ಸಭೆ ಸಮಾರಂಭಗಳು, ಸಂದರ್ಶನಗಳು, ಸಂಬಂಧಿಕರ ಮನೆ ಭೇಟಿ, ಗಣ್ಯರ ಭೇಟಿ, ಗೆಳೆಯರ ಭೇಟಿ, ನಮಗೆ ಬೇಕಾದ ವಸ್ತುಗಳನ್ನು ಖರೀದಿಸುವ ಸಲುವಾಗಿ ಮಾರ್ಕೆಟ್, ಅಂಗಡಿಗಳ ಭೇಟಿ, ಮೊಬೈಲ್, ಸಾಮಾಜಿಕ ಜಾಲತಾಣಗಳ ಮೂಲಕ ಸಂವಹನ ಹೀಗೆ ಇನ್ನೂ ಹಲವಾರು ಸನ್ನಿವೇಶಗಳಲ್ಲಿ ನಾವು ತೊಡಗಿಕೊಳ್ಳುತ್ತೇವೆ. ಈ ಎಲ್ಲಾ ಸಂದರ್ಭಗಳಲ್ಲೂ ನಾವು ವ್ಯವಹರಿಸುತ್ತಿರುವ ವ್ಯಕ್ತಿಯಾಧಾರಿತವಾಗಿ ನಮ್ಮ ಮಾತುಕತೆ ಇರುವುದು ಸಹಜ. ಆದರೆ ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಕಿರಚುವ, ಗಟ್ಟಿ ಧ್ವನಿಯಲ್ಲಿ ಮಾತನಾಡುವ, ಅವಾಚ್ಯ ಶಬ್ದಗಳಿಂದ ಇನ್ನೊಬ್ಬರನ್ನು ನಿಂದಿಸುವ, ಗೌರವ ನೀಡದೇ ಮಾತನಾಡುವ ನಿದರ್ಶನಗಳನ್ನೂ ನಾವು ಗಮನಿಸಿದ್ದೇವೆ ಮತ್ತು



ನಾವೂ ಈ ಸನ್ನಿವೇಶಗಳನ್ನು ಎದುರಿಸಿದ್ದೇವೆ ಅಥವಾ ಭಾಗಿಯಾಗಿದ್ದೇವೆ. ಹಿರಿಯರು ಕಿರಿಯರೆನ್ನದೆ ಎಲ್ಲರನ್ನೂ ಗೌರವಿಸುತ್ತಾ, ಮಹಿಳೆಯರಿಗೆ, ಎಲ್ಲಾ ವೃತ್ತಿಯ ಬಂಧುಗಳೊಂದಿಗೆ ನಮ್ಮ ಸಂವಹನ ಆತ್ಮೀಯತೆಯಿಂದ ಕೂಡಿರಬೇಕು. ಎಲ್ಲಿ, ಯಾರ ಬಳಿ, ಹೇಗೆ ವರ್ತಿಸಬೇಕು ಎನ್ನುವ ಸಾಮಾನ್ಯ ಸಾಮಾಜಿಕ ಪ್ರಜ್ಞೆ ನಮ್ಮಲ್ಲಿರಬೇಕು. ಇದನ್ನೇ ವಾಣಿವಿವೇಕ ಎಂದು ಕರೆಯಲಾಗುತ್ತದೆ. ನಾವಾಡುವ ಪ್ರತಿ ಮಾತು ವಿವೇಕದಿಂದ ಕೂಡಿರಬೇಕು ಎನ್ನುವುದನ್ನು ಇದು ತಿಳಿಸುತ್ತದೆ. ನಮ್ಮ ಮಾತು ನಮ್ಮ ವ್ಯಕ್ತಿತ್ವವನ್ನು ಸೂಚಿಸುತ್ತದೆ.

ಸಂಪಾದಕೀಯ ಸಹಕಾರ: ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಮೇಘ ಪ್ರಮೋದ್, ದೀಕ್ಷಿತ್ ನಾಯರ್ ಮಂಡ್ಯ, ಪಂಚಮಿ ಬಾಕಿಲಪದವು

## 2029–30ರ ವೇಳೆಗೆ 50,000 ಕೋಟಿ ರೂ ತಲುಪಲಿದೆ ಭಾರತದ ರಕ್ಷಣಾ ರಫ್ತು

10 ವರ್ಷಗಳ ಹಿಂದೆ ಕೇವಲ 600 ಕೋಟಿ ರೂ.ಗಳಷ್ಟಿದ್ದ ರಕ್ಷಣಾ ರಫ್ತು 2023–24ರ ಆರ್ಥಿಕ ವರ್ಷದಲ್ಲಿ ದಾಖಲೆಯ 21,000 ಕೋಟಿ ರೂ.ಗಳನ್ನು ದಾಟಿದ್ದರಿಂದ ಸ್ವಾವಲಂಬನೆ ಸಾಧಿಸುವ ಸರಕಾರದ ಪ್ರಯತ್ನಗಳು ಹೆಚ್ಚು ಯಶಸ್ವಿಯಾಗುತ್ತಿವೆ. ಈ ಪ್ರಗತಿ ಮುಂದುವರಿಯಲಿದೆ ಮತ್ತು 2029–30ರ ವೇಳೆಗೆ ರಕ್ಷಣಾ ರಫ್ತು 50,000 ಕೋಟಿ ರೂ.ಗೆ ತಲುಪಲಿದೆ ಎಂದು ಕಾನ್ಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ 65ನೇ ಸಂಸ್ಥಾಪನಾ ದಿನದ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

## ದೆಹಲಿಯ ಜನಗಣತಿ ಕಟ್ಟಡದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರತಿಮೆ ಅನಾವರಣ

ನವದೆಹಲಿಯ ಜನಗಣತಿ ಕಟ್ಟಡದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಪ್ರತಿಮೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅನಾವರಣಗೊಳಿಸಿದರು. ಜನನ ಮತ್ತು ಮರಣಗಳ ತಡೆರಹಿತ ಮತ್ತು ತೊಂದರೆ-ಮುಕ್ತ ನೋಂದಣಿಗೆ ಅನುಕೂಲವಾಗುವಂತೆ ಸಿವಿಲ್ ರಿಜಿಸ್ಟ್ರೇಶನ್ ಸಿಸ್ಟಮ್ ಮೊಬೈಲ್ ಅಪ್ಲಿಕೇಶನ್ ಅನ್ನು ಕೂಡ ಅವರು ಪ್ರಾರಂಭಿಸಿದರು. ಡಿಜಿಟಲ್ ಇಂಡಿಯಾದ ದೃಷ್ಟಿಯಡಿಯಲ್ಲಿ ನಾಗರಿಕ ನೋಂದಣಿ ವ್ಯವಸ್ಥೆ (CRS) ಮೊಬೈಲ್ ಅಪ್ಲಿಕೇಶನ್‌ನ ಬಿಡುಗಡೆಯು ಆಡಳಿತದೊಂದಿಗೆ ತಂತ್ರಜ್ಞಾನವನ್ನು ಸಂಯೋಜಿಸುವ ಮಹತ್ವದ ಉಪಕ್ರಮವಾಗಿದೆ ಎಂದರು.



# ಸಾಲುದ್ದದ ಸುದ್ದಿಗಳು

## 2,000 ರೈಲ್ವೇ ನಿಲ್ದಾಣಗಳು ಸೌರ ಶಕ್ತಿಯನ್ನು ಬಳಸಿಕೊಳ್ಳುತ್ತಿವೆ: ರೈಲ್ವೇ ಸಚಿವಾಲಯ

ಭಾರತೀಯ ರೈಲ್ವೇಯು ನಿವ್ವಳ ಶೂನ್ಯ ಇಂಗಾಲದ ಹೊರಸೂಸುವಿಕೆಯ ಭವಿಷ್ಯದತ್ತ ದಾಪುಗಾಲು ಹಾಕುತ್ತಿದೆ. ಇದರ ಭಾಗವಾಗಿ ಸೌರ ಶಕ್ತಿಯನ್ನು ಬಳಸಿಕೊಂಡು 2,000ಕ್ಕೂ ಹೆಚ್ಚು ರೈಲು ನಿಲ್ದಾಣಗಳನ್ನು ಹೊಂದಿದೆ. ಟ್ವಿಟರ್‌ನಲ್ಲಿ ರೈಲ್ವೇ ಸಚಿವಾಲಯವು ಹಂಚಿಕೊಂಡ ಅಪ್‌ಡೇಟ್‌ನಲ್ಲಿ, ಒಟ್ಟು 189.41 ಮೆಗಾವ್ಯಾಟ್ ಸೌರ ಮೇಲ್ಛಾವಣಿ ಸಾಮರ್ಥ್ಯವನ್ನು ಈಗಾಗಲೇ ನಿಯೋಜಿಸಲಾಗಿದೆ ಎಂದು ಬಹಿರಂಗಪಡಿಸಲಾಗಿದೆ, ಭಾರತೀಯ ರೈಲ್ವೇ ತನ್ನ ಹಸಿರು ಗುರಿಗಳ ನಿರ್ಣಾಯಕ ಭಾಗವಾಗಿ ಸುಸ್ಥಿರ ಇಂಧನ ಮೂಲಗಳಿಗೆ ಬದ್ಧತೆಯನ್ನು ತಿಳಿಸುತ್ತದೆ. ವಿಶ್ವದ ಅತಿದೊಡ್ಡ "ಹಸಿರು ರೈಲ್ವೆ" ಆಗುವ ಈ ಪ್ರಯತ್ನಗಳ ಭಾಗವಾಗಿ, ಭಾರತೀಯ ರೈಲ್ವೇ ತನ್ನ ವಿದ್ಯುದ್ದೀಕರಣ ಗುರಿಗಳನ್ನು ಸಹ ಮುಂದುವರಿಸುತ್ತಿದೆ.

## ರೂ.12,850 ಕೋಟಿಯ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಬಹು ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಧನ್ವಂತರಿ ಜಯಂತಿ ಮತ್ತು 9ನೇ ಆಯುರ್ವೇದ ದಿನದಂದು ನವದೆಹಲಿಯಲ್ಲಿ ಸುಮಾರು 12,850 ಕೋಟಿ ರೂಪಾಯಿಗಳ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಬಹು ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು. ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಗೆ ಪ್ರಮುಖ ಸೇರ್ಪಡೆಯಾಗಿ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಎಲ್ಲಾ ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆಯ ವಿಸ್ತರಣೆಯನ್ನು ಕೂಡ ಪ್ರಾರಂಭಿಸಲಾಗಿದೆ. ಇದು ಎಲ್ಲಾ ಹಿರಿಯ ನಾಗರಿಕರಿಗೆ ಅವರ ಆದಾಯವನ್ನು ಲೆಕ್ಕಿಸದೆ ಆರೋಗ್ಯ ರಕ್ಷಣೆಯನ್ನು ಒದಗಿಸಲು ಸಹಾಯ ಮಾಡುತ್ತದೆ. ಅಲ್ಲದೇ ಮೋದಿ ಅವರು ಭಾರತದ ಮೊದಲ ಅಖಿಲ ಭಾರತ ಆಯುರ್ವೇದ ಸಂಸ್ಥೆಯ 2ನೇ ಹಂತವನ್ನು ಉದ್ಘಾಟಿಸಿದರು. ಇದು ಪಂಚಕರ್ಮ




ಆಸ್ಪತ್ರೆ, ಔಷಧ ತಯಾರಿಕೆಗೆ ಆಯುರ್ವೇದ ಔಷಧಾಲಯ, ಕ್ರೀಡಾ ಔಷಧ ಘಟಕ, ಕೇಂದ್ರ ಗ್ರಂಥಾಲಯ, ಐಟಿ ಮತ್ತು ಸ್ಟಾರ್ಟ್‌ಅಪ್ ಕೇಂದ್ರ ಮತ್ತು 500 ಆಸನಗಳ ಸಭಾಂಗಣವನ್ನು ಒಳಗೊಂಡಿದೆ.

## 2036ರಲ್ಲಿ ಒಲಿಂಪಿಕ್ಸ್ ಆಯೋಜನೆಗೆ ಔಪಚಾರಿಕವಾಗಿ ಬಿಡ್ ಮಾಡಿದ ಭಾರತ

ಕ್ರೀಡಾ ಶಕ್ತಿಕೇಂದ್ರವಾಗುವ ನಿಟ್ಟಿನಲ್ಲಿ ಭಾರತ ಮಹತ್ವದ ಹೆಜ್ಜೆ ಇಟ್ಟಿದೆ. ಭಾರತೀಯ ಒಲಿಂಪಿಕ್ ಅಸೋಸಿಯೇಷನ್ (ಐಒಎ) ಅಕ್ಟೋಬರ್ 1 ರಂದು ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಗೆ ಔಪಚಾರಿಕವಾಗಿ ಪತ್ರವನ್ನು ಕಳುಹಿಸಿ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸುವ ಆಸಕ್ತಿಯನ್ನು ವ್ಯಕ್ತಪಡಿಸಿದೆ. ಮೂಲಗಳ ಪ್ರಕಾರ, 2036ರಲ್ಲಿ ಒಲಿಂಪಿಕ್ಸ್ ಮತ್ತು ಪ್ಯಾರಾಲಿಂಪಿಕ್ಸ್ ಆಟಗಳನ್ನು ಭಾರತದಲ್ಲಿ ನಡೆಸಲು ಭಾರತ ಔಪಚಾರಿಕವಾಗಿ ಬಿಡ್ ಮಾಡುತ್ತಿದೆ.

## ಪಕ್ಷಪಾತದ ಮಾಹಿತಿ: ವಿಕಿಪೀಡಿಯಾಗೆ ಕೇಂದ್ರದಿಂದ ನೋಟಿಸ್

ಪಕ್ಷಪಾತ ಮತ್ತು ಅಸಮರ್ಪಕ ಮಾಹಿತಿಯ ಆರೋಪದ ಮೇಲೆ ಭಾರತ ಸರ್ಕಾರವು ವಿಕಿಪೀಡಿಯಾಕ್ಕೆ ನೋಟಿಸ್ ನೀಡಿದೆ. ನೋಟಿಸ್‌ನಲ್ಲಿ, ಆನ್‌ಲೈನ್ ವಿಶ್ವಕೋಶ ಎದುರಿಸುತ್ತಿರುವ ಪಕ್ಷಪಾತ ಮತ್ತು ತಪ್ಪು ಮಾಹಿತಿಯ ಆರೋಪಗಳ ಬಗ್ಗೆ ಪ್ರಶ್ನೆ ಮಾಡಿದೆ. ಅಲ್ಲದೇ ವಿಕಿಪೀಡಿಯಾದ ಸಂಪಾದಕೀಯ ನಿಯಂತ್ರಣವನ್ನು ಹೊಂದಿರುವ ಸಣ್ಣ ಗುಂಪಿನ ಬಗ್ಗೆಯೂ ಸಹ ಸೂಚಿಸಿದೆ. ವಿಕಿಪೀಡಿಯಾವನ್ನು ಮಧ್ಯವರ್ತಿಯಾಗಿ ಪರಿಗಣಿಸುವ ಬದಲು ಪ್ರಕಾಶಕನಾಗಿ ಏಕೆ ಪರಿಗಣಿಸಬಾರದು ಎಂದು ಕೇಂದ್ರವು ಪ್ರಶ್ನಿಸಿದೆ.

# ಛಲವಿದ್ದರೆ ಇಲ್ಲಿ ಎಲ್ಲವೂ ಸಾಧ್ಯ ಎನ್ನುವುದಕ್ಕೆ ನಿದರ್ಶನ ಅಫ್ಜಲ್

ಪ್ರೇರಣಾ

ಸಾಧನೆ ಎನ್ನುವುದು ಸೋಮಾರಿಯ ಸ್ವತ್ತಲ್ಲ ಎಂಬ ಮಾತನ್ನು ಅಕ್ಷರಶಃ ನಿಜಗೊಳಿಸಿದ ಅಗಣಿತ ಉದಾಹರಣೆಗಳು ನಮ್ಮ ಕಣ್ಮುಂದಿವೆ. ಎಷ್ಟೇ ನ್ಯೂನತೆಗಳಿದ್ದರೂ ಅವುಗಳನ್ನು ಸವಾಲುಗಳೆಂದು ಸ್ವೀಕರಿಸಿ ಯುವಕರಿಗೆ ಪ್ರೇರಣೆಯ ಸ್ರೋತರಾದವರ ಸಾಲಿಗೆ ಮೂಲತಃ ಕೇರಳದ ಕೊಚ್ಚಿನ್ ವಾಸಿ ಮೊಹಮ್ಮದ್ ಅಫ್ಜಲ್ ಸೇರುತ್ತಾರೆ. ತುಂಬು ಕುಟುಂಬದಲ್ಲಿ ಬೆಳೆದ ಹುಡುಗ. ಶಾಲೆಯಲ್ಲಿ ಪಾಠದೊಂದಿಗೆ ಆಟೋಟಗಳಲ್ಲೂ ಚುರುಕಾಗಿದ್ದವನು. ಸಾಧಕನಾಗುವ ಬಯಕೆಯಿಂದ ನೂರಾರು ಕನಸುಗಳ ಬೆನ್ನು ಹತ್ತಲು ಶುರು ಮಾಡಿದ್ದವನು. ಆದರೆ ದುರಾದೃಷ್ಟವಶಾತ್ ಅಫ್ಜಲ್ ತನ್ನ ಹದಿಮೂರನೇ ವಯಸ್ಸಿನಲ್ಲಿ ಅಂದರೆ ಎಂಟನೇ ತರಗತಿಯಲ್ಲಿ ಓದುವಾಗ ತನ್ನ ಎರಡೂ ಕಣ್ಣುಗಳ ದೃಷ್ಟಿಯನ್ನು ಸಂಪೂರ್ಣವಾಗಿ ಕಳೆದುಕೊಂಡ. ಇಡೀ ಜಗತ್ತನ್ನು ನೋಡುತ್ತಿದ್ದ, ಎಲ್ಲರೊಂದಿಗೆ ಕೂಡಿ ಆಡುತ್ತಿದ್ದ ಹಾಗೂ ತಂದೆ ತಾಯಿಯ ಎದೆ ಎತ್ತರಕ್ಕೆ ಬೆಳೆದು ನಿಂತಿದ್ದ ಹುಡುಗ ದಿಢೀರನೆ ತನ್ನ ಕಣ್ಣುಗಳನ್ನು ಕಳೆದುಕೊಳ್ಳುತ್ತಾನೆ ಎಂದರೆ ಆ ಕ್ಷಣಕ್ಕೆ ಅವನಿಗೆ ಮತ್ತು ಅವನನ್ನು ಹೆತ್ತವರಿಗೆ ಹೇಗಾಗಬೇಡ? ಹುಟ್ಟು ಕುರುಡನಾದರೆ ಪರವಾಗಿಲ್ಲ. ಆದರೆ ಬುದ್ಧಿ ಬೆಳೆದಿದ್ದ ವಯಸ್ಸಿನಲ್ಲಿ ಕುರುಡನಾಗುವುದು ಎಂದರೆ ಅದು ನಿಜಕ್ಕೂ ನೋವಿನ ಸಂಗತಿ.

ಆದರೆ ಅಫ್ಜಲ್‌ನ ತಂದೆ ತಾಯಿ ತುಂಬಾ ದಿನ ಕೊರಗಲಿಲ್ಲ. ಮಗನಿಗೆ ಹೀಗಾಯಿತಲ್ಲ ಎಂದು ತಲೆ ಮೇಲೆ ಕೈ ಕೊಟ್ಟುಕೊಂಡು ಕೂರಲಿಲ್ಲ. ಅಫ್ಜಲ್ ಕೂಡ ಪ್ರಾರಂಭದ ದಿನಗಳಲ್ಲಿ ಸಂಕಟವನ್ನು ಅನುಭವಿಸಿದ್ದು ಬಿಟ್ಟರೆ ಕುರುಡನಾಗಿ ಬಿಟ್ಟೆ ಎಂದುಕೊಂಡು ಧೃತಿಗೆಡಲಿಲ್ಲ. ಕುರುಡನಾಗಿದ್ದುಕೊಂಡೇ ಬದುಕು ಕಟ್ಟಿಕೊಳ್ಳಲು ಮತ್ತು ಅಸಾಧ್ಯವಾದುದನ್ನು ಸಾಧಿಸಲು ಪ್ರಯತ್ನಪಟ್ಟನು. ಕನಸಿನ ಬೇಟೆಗೆ ಕಣ್ಣುಗಳ ಅಗತ್ಯವಿಲ್ಲ ಗುರಿ ಇದ್ದರೆ ಸಾಕು ಎಂಬುದನ್ನು ಅರಿತುಕೊಂಡನು. ತನ್ನ ಗುರಿಯ ಕಡೆಗೆ ಓಡಿದನು ಕೂಡ. ಹೌದು, ಕುರುಡುತನಕ್ಕೆ ಒಗ್ಗಿಕೊಂಡ ಅಫ್ಜಲ್ ಚೆನ್ನಾಗಿ ಓದಿಕೊಂಡ. ನಾಲ್ಕಾರು ಭಾಷೆಗಳನ್ನು ಅಸ್ಖಲಿತವಾಗಿ ಮಾತನಾಡುವುದನ್ನು ಕಲಿತ. ಕೇರಳ



ಬ್ಲೈಂಡ್ ಕ್ರಿಕೆಟ್ ತಂಡದಲ್ಲಿ ದಾಂಡಿಗ ಮತ್ತು ಬೌಲರ್ ಆಗಿ ಆಟವಾಡಿದ. ಬ್ಲೈಂಡ್ ಫುಟ್ಬಾಲ್ ಆಟದಲ್ಲೂ ಅದ್ಭುತ ಡಿಫೆಂಡರ್ ಆಗಿ ಯಶಸ್ಸುಗಳಿಸಿದ. ಅಷ್ಟು ಸಾಲದು ಎಂಬಂತೆ ಮೀನಿನಂತೆ ಈಜುವುದನ್ನು ಕಲಿತ.

ಇತ್ತೀಚೆಗೆ ಸಾಹಸ ಪ್ರವೃತ್ತಿಯನ್ನೂ ಮೈಗೂಡಿಸಿಕೊಂಡಿರುವ ಅಫ್ಜಲ್ ಸಾಹಸ ಕಲೆಗಳನ್ನು ಕಲಿಯುತ್ತಿದ್ದಾರೆ. ತಿಂಗಳಿಗೊಮ್ಮೆಯಾದರೂ ರೋಚಕತೆಯಿಂದ ಕೂಡಿರುವ ಸ್ಥಳಗಳಿಗೆ ಟ್ರೆಕ್ಕಿಂಗ್ ಹೋಗುತ್ತಾರೆ. ದಿನ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಅಫ್ಜಲ್ ಸದ್ಯಕ್ಕೆ ಮುಂಬೈನ ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್ ವಿಶ್ವವಿದ್ಯಾನಿಲಯದಲ್ಲಿ "ಡಿಸೆಬಿಲಿಟೀಸ್ ಸ್ಪೋರ್ಟ್ಸ್ ಅಂಡ್ ಸೋಶಿಯಲ್ ಇನೋವೇಷನ್" ವಿಷಯದ ಕುರಿತು ಪಿ.ಹೆಚ್‌ಡಿ. ಮಾಡುತ್ತಿದ್ದಾರೆ.

ಇಕ್ವಿಬಿಯಿಂಗ್ ಎಂಬ ಸಂಸ್ಥೆ ಅಫ್ಜಲ್‌ನ ಕನಸಿನ ಕೂಸು. ಇಕ್ವಿಬಿಯಿಂಗ್ ಸಾಮಾಜಿಕ ಕಳಕಳಿಯುಳ್ಳ ಸಂಸ್ಥೆ. "Equity with wellbeing of persons with Disabilities" ಎಂಬುದು ಸಂಸ್ಥೆಯ ಧ್ಯೇಯವಾಕ್ಯ. ತನ್ನಂತೆಯೇ ಕುರುಡರಾಗಿರುವ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತಂದು ಅವರನ್ನು ಸಾಧಕರನ್ನಾಗಿಸುವ ಕನಸು ಅಫ್ಜಲ್ ಅವರದ್ದು. ಡಾ. ಅನಂತಲಕ್ಷ್ಮಿ ಅವರ ಸಹಕಾರದೊಂದಿಗೆ ಅಫ್ಜಲ್ ಅವರು ಸ್ಥಾಪಿಸಿರುವ ಇಕ್ವಿಬಿಯಿಂಗ್ ಫೌಂಡೇಶನ್ ಕಳೆದ ಎರಡು-ಮೂರು ವರ್ಷಗಳಿಂದ ಮಹತ್ವದ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ. ಕುರುಡರು ಅಥವಾ ವಿಶೇಷ ಚೇತನ ಮಕ್ಕಳನ್ನು ಸದೃಢವಾಗಿಸಿ ಅವರಿಗೆ ಆತ್ಮವಿಶ್ವಾಸ ತುಂಬಿ ಮತ್ತು ಅವರು ತಮ್ಮಲ್ಲಿನ ಕೊರತೆಗಳನ್ನು ಮೆಟ್ಟಿ ನಿಲ್ಲುವಂತೆ ಇಕ್ವಿಬಿಯಿಂಗ್ ತಂಡ ಪ್ರೇರೇಪಿಸುತ್ತಿದೆ. ಬಹು ಮುಖ್ಯವಾಗಿ ಈ ತಂಡವು ವಿಶೇಷ ಚೇತನ ಮಕ್ಕಳನ್ನು ಕ್ರೀಡಾ ಕ್ಷೇತ್ರದತ್ತ ಕರೆತರುತ್ತಿದೆ. ಅಂಧತ್ವವನ್ನು ಮೆಟ್ಟಿ ಕ್ರಿಕೆಟ್ ಮತ್ತು ಫುಟ್ಬಾಲ್ ಆಡುವುದನ್ನು ಕಲಿತಿರುವ ಅಫ್ಜಲ್ ನೂರಾರು ಇತರೆ ಅಂಧ ಮಕ್ಕಳಿಗೂ ಕ್ರಿಕೆಟ್, ಫುಟ್ಬಾಲ್ ಆಟಗಳ ತರಬೇತಿಯನ್ನು ನೀಡುತ್ತಿದ್ದಾರೆ.

ಸದ್ಯಕ್ಕೆ ಇಕ್ವಿಬಿಂಗ್ ಫೌಂಡೇಶನ್ ಕರ್ನಾಟಕದಲ್ಲಿ ತರಬೇತಿಯನ್ನು ಪ್ರಾರಂಭಿಸಿದೆ. ನೂರಾರು ವಿಶೇಷ ಚೇತನ ವಿದ್ಯಾರ್ಥಿಗಳು ಈಜು ಕಲಿಯಲು ಮುಂದಾಗಿದ್ದಾರೆ. ಮುಂದಿನ ದಿನಗಳಲ್ಲಿ ಆ ಮಕ್ಕಳು ಕೂಡ ಮೀನಿನಂತೆ ಈಜಲಿದ್ದಾರೆ. ಇಕ್ವಿಬಿಯಿಂಗ್‌ನ ಈ ಯೋಜನೆಯನ್ನು ಇಡೀ ದೇಶದಾದ್ಯಂತ ವಿಸ್ತರಿಸುವ ಆಸೆ ಅಫ್ಜಲ್ ಅವರಿಗೆ ಇದೆ. ಸಣ್ಣ ಪುಟ್ಟ ಸಮಸ್ಯೆಗಳು ಎದುರಾದರೆ ಸಾಕು ಎಲ್ಲವೂ ಮುಗಿದೇ ಹೋಯಿತು ಎಂದುಕೊಳ್ಳುವ ನಮಗೆ ಅಫ್ಜಲ್ ಅಂಥವರು ಮಾದರಿಯಾಗುತ್ತಾರೆ. ಇನ್ನಾದರೂ ಕೊರಗುವುದನ್ನು ಬಿಟ್ಟು ಭರವಸೆಯ ದಾರಿಯತ್ತ ಹೆಜ್ಜೆ ಹಾಕೋಣ. ನೆನಪಿರಲಿ, ಛಲವಿದ್ದರೆ ಇಲ್ಲಿ ಎಲ್ಲವೂ ಸಾಧ್ಯ! ನೆಪ ಹೇಳಿಕೊಂಡು ವೃಥಾ ಕಾಲಹರಣ ಮಾಡುವುದನ್ನು ಇಂದಾದರೂ ನಿಲ್ಲಿಸೋಣ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th NOVEMBER 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 15-11-2024



## ಫೋನ್ ಸಂಭಾಷಣೆ ಸಾಕ್ಷಿಯಾಗಿ ಬಳಸುವುದು ಖಾಸಗಿತನದ ಉಲ್ಲಂಘನೆ: ಹಿಮಾಚಲ ಹೈಕೋರ್ಟ್

ವೈವಾಹಿಕ ಪ್ರಕರಣವೊಂದರಲ್ಲಿ, ದೂರವಾಣಿಯಲ್ಲಿ ನಡೆದ ಖಾಸಗಿ ಸಂಭಾಷಣೆಯನ್ನು ಸಾಕ್ಷಿಯಾಗಿ ಪರಿಗಣಿಸಲಾಗದು ಎಂದು ಹಿಮಾಚಲ ಪ್ರದೇಶ ಹೈಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನಲ್ಲಿ ಹೇಳಿದೆ. ಈ ಸುದ್ದಿಯನ್ನು 'ಬಾರ್ ಆ್ಯಂಡ್ ಬೆಂಚ್' ವರದಿ ಮಾಡಿದೆ.

'ದೂರವಾಣಿಯಲ್ಲಿ ನಡೆದ ಖಾಸಗಿ ಮಾತುಕತೆಯು ಖಾಸಗಿತನ ಹಕ್ಕಿನಡಿ ಬರುತ್ತದೆ' ಎಂದು ನ್ಯಾಯಮೂರ್ತಿ ಬಿಪಿನ್ ಚಂದರ್ ನೇಗಿ ತೀರ್ಪು ನೀಡುವಾಗ ಹೇಳಿದ್ದಾರೆ. 'ವ್ಯಕ್ತಿಯೊಬ್ಬನ ಖಾಸಗಿ ಜೀವನದಲ್ಲಿ ದೂರವಾಣಿ ಸಂಭಾಷಣೆ ಪ್ರಮುಖ ವಿಷಯ. ಒಬ್ಬರ ಮನೆ/ಕಚೇರಿಯ ಖಾಸಗಿ ದೂರವಾಣಿ ಸಂಭಾಷಣೆ ಖಂಡಿತವಾಗಿಯೂ ಖಾಸಗಿತನದ ಹಕ್ಕು ಎಂದು ಹೇಳಿಕೊಳ್ಳಬಹುದು' ಎಂದು ಅಕ್ಟೋಬರ್ 17 ರಂದು ನೀಡಿದ ತೀರ್ಪಿನಲ್ಲಿ ಹೇಳಿದೆ.


## ಇಸ್ರೋದಿಂದ ದೇಶದ ಮೊತ್ತಮೊದಲ ಅನಲಾಗ್ ಅಂತರಿಕ್ಷ ಮಿಷನ್ ಪ್ರಯೋಗ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ), ತನ್ನ ಮೊದಲ ಅನಲಾಗ್ ಬಾಹ್ಯಾಕಾಶ ಕಾರ್ಯಾಚರಣೆಯ ಪ್ರಯೋಗವನ್ನು ಲಡಾಖ್‌ನ ಲೇಜ್‌ನಲ್ಲಿ ಆರಂಭಿಸಿದೆ. ಈ ನಿಮಿತ್ತ ಹ್ಯಾಬ್–1 ಎಂಬ ಸಿಮ್ಯುಲೇಟರ್ ರೀತಿಯ ಸಣ್ಣ ಸಾಧನ ಇರಿಸಲಾಗಿದ್ದು, ಇದು ಅಂತರಗ್ರಹಗಳ ಆವಾಸಸ್ಥಾನದಲ್ಲಿ ಜೀವನವನ್ನು ಅನುಕರಿಸಿ ಅಧ್ಯಯನ ಮಾಡುತ್ತದೆ. ಭವಿಷ್ಯದ ಗಗನಯಾತ್ರಿಗಳು ಭೂಮಿಯ ಆಚೆಗಿನ ಕಾರ್ಯಾಚರಣೆಗಳಲ್ಲಿ ಎದುರಿಸಬಹುದಾದ ಸವಾಲು ಅರ್ಥಮಾಡಿಕೊಳ್ಳಲು ಹೊಸ ಮಿಷನ್ ಸಹಾಯ ಮಾಡುತ್ತದೆ ಹಾಗೂ ಭೂಮಿಯ ಆಚೆಯ ಸ್ಥಿತಿಗಳನ್ನು ಈ ಮಿಷನ್‌ನಲ್ಲಿ ಅಧ್ಯಯನ ಮಾಡಲಾಗುತ್ತದೆ. ಮಂಗಳ ಮತ್ತು ಚಂದ್ರನ ಭೂದೃಶ್ಯಗಳನ್ನು ಹೋಲುವ ವಿಶಿಷ್ಟ ಭೌಗೋಳಿಕ ಗುಣಲಕ್ಷಣಗಳಿಂದಾಗಿ ಲಡಾಖ್ ಅನ್ನು ಕಾರ್ಯಾಚರಣೆಯ ಸ್ಥಳವಾಗಿ ಆಯ್ಕೆ ಮಾಡಲಾಗಿದೆ.



## ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯಿದೆ 2004: ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ರದ್ದುಗೊಳಿಸಿದ ಸುಪ್ರೀಂಕೋರ್ಟ್

ಉತ್ತರ ಪ್ರದೇಶ ಮದರಸಾ ಶಿಕ್ಷಣ ಮಂಡಳಿ ಕಾಯಿದೆ 2004 (UP Madarsa Education Act) ಅನ್ನು ಅಸಾಂವಿಧಾನಿಕ ಎಂದು ಘೋಷಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ತೀರ್ಪನ್ನು ಸುಪ್ರೀಂಕೋರ್ಟ್ ನವೆಂಬರ್ 5ರಂದು ರದ್ದುಗೊಳಿಸಿದೆ. ಸಿಜೆಐ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠ ಈ ತೀರ್ಪು ನೀಡಿದೆ. ತೀರ್ಪು ನೀಡುವಾಗ, ಇದು ಜಾತ್ಯತೀತ ತತ್ವವನ್ನು ಉಲ್ಲಂಘಿಸುವುದಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ನ್ಯಾಯಾಲಯದ ಈ ನಿರ್ಧಾರವು ಯುಪಿಯಲ್ಲಿ ಮದರಸಾಗಳು ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತದೆ. ಯುಪಿಯಲ್ಲಿ 13 ಸಾವಿರ ಮದರಸಾಗಳಲ್ಲಿ 17 ಲಕ್ಷ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ತಳ್ಳಿಹಾಕಿದ ಸುಪ್ರೀಂಕೋರ್ಟ್, ಯುಪಿ ಮದರಸಾ ಕಾಯ್ದೆ ಮೂಲಭೂತ ಹಕ್ಕುಗಳ ಉಲ್ಲಂಘನೆಯಲ್ಲ. ಮದರಸಾ ಕಾಯಿದೆಯು ಸಂವಿಧಾನದ ಮೂಲ ರಚನೆಯ ಉಲ್ಲಂಘನೆಯಲ್ಲ. ಶಿಕ್ಷಣ ಗುಣಮಟ್ಟದ ನಿಯಮಗಳು ಮದರಸಾಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಪಠ್ಯಕ್ರಮದ ಜತೆಗೆ ವಿದ್ಯಾರ್ಥಿಗಳ ಆರೋಗ್ಯವೂ ಮುಖ್ಯವಾಗಿದೆ. 2004ರಲ್ಲಿ ಉತ್ತರಪ್ರದೇಶದಲ್ಲಿ ಮದರಸಾಗಳಿಗೆ ಸಂಬಂಧಿಸಿದಂತೆ ಕಾನೂನನ್ನು ರಚಿಸಲಾಯಿತು. ಕಾನೂನಿನ ಅಡಿಯಲ್ಲಿ ಮದರಸಾ ಮಂಡಳಿಯನ್ನು ರಚಿಸಲಾಯಿತು. ಮದರಸಾದಲ್ಲಿ ಶಿಕ್ಷಣವನ್ನು ಆಯೋಜಿಸುವುದು ಇದರ ಉದ್ದೇಶವಾಗಿತ್ತು. ಮದರಸಾಗಳು ಮಾನ್ಯತೆಗಾಗಿ ಕನಿಷ್ಠ ಮಾನದಂಡಗಳನ್ನು ಪೂರೈಸಬೇಕಾಗಿತ್ತು. ಯುಪಿಯಲ್ಲಿ 13 ಸಾವಿರ ಮದರಸಾಗಳು ಮಂಡಳಿಯಿಂದ ಮಾನ್ಯತೆ ಪಡೆದಿವೆ. ಆದರೆ ಸುಮಾರು 8500 ಮದರಸಾಗಳು ಮಂಡಳಿಯಿಂದ ಗುರುತಿಸಲ್ಪಟ್ಟಿಲ್ಲ.



**ಚಾಮರಾಜಪೇಟೆಯಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಆಯೋಜಿಸಿದ್ದ 4ನೇ ಕನ್ನಡ ಪುಸ್ತಕ ಹಬ್ಬವನ್ನು ಉದ್ಘಾಟಿಸಿ ಆದಿಚುಂಚನಗಿರಿ ಮಠದ ಡಾ। ನಿರ್ಮಲಾನಂದನಾಥ ಸ್ವಾಮೀಜಿ, ಜ್ಞಾನಪೀಠ ಪುರಸ್ಕೃತ ಚಂದ್ರಶೇಖರ ಕಂಬಾರ, ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ. ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಪುಸ್ತಕಗಳನ್ನು ವೀಕ್ಷಿಸಿದರು.**


## ಅಕ್ಟೋಬರ್‌ನ್ನು "ಹಿಂದೂ ಪರಂಪರೆ ಮಾಸ" ಎಂದು ಘೋಷಿಸಿದ ಆಸ್ಟ್ರೇಲಿಯಾ



ಆಸ್ಟ್ರೇಲಿಯಾವು ಅಕ್ಟೋಬರ್ ತಿಂಗಳನ್ನು "ಹಿಂದೂ ಪರಂಪರೆ ಮಾಸ" ಎಂದು ಘೋಷಿಸಿದೆ. ಆಸ್ಟ್ರೇಲಿಯಾ ಸಂಸದ ಆಂಡ್ರ್ಯೂ ಚಾರ್ಲ್ಟನ್ ಅವರು ಈ ಘೋಷಣೆ ಮಾಡಿದ್ದಾರೆ. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಹಿಂದೂಗಳು ಪ್ರತಿವರ್ಷ ದೀಪಾವಳಿಯನ್ನು ಅತ್ಯಂತ ಅದ್ದೂರಿಯಾಗಿ ಆಚರಿಸುತ್ತಾರೆ. ಈ ವರ್ಷ ಆಸ್ಟ್ರೇಲಿಯಾ ಅಕ್ಟೋಬರ್ ತಿಂಗಳನ್ನು "ಹಿಂದೂ ಪರಂಪರೆ ಮಾಸ" ಎಂದು ಘೋಷಿಸಲಾಗಿದೆ ಎಂದು ಆಂಡ್ರ್ಯೂ ಚಾರ್ಲ್ಟನ್ ಹೇಳಿದ್ದಾರೆ. ಈ ಘೋಷಣೆಯು ಬಹುಸಾಂಸ್ಕೃತಿಕತೆಗೆ ಆಸ್ಟ್ರೇಲಿಯಾದ ಬದ್ಧತೆಯನ್ನು ಸಂಕೇತಿಸುತ್ತದೆ ಮತ್ತು ರಾಷ್ಟ್ರದ ಸಾಮಾಜಿಕ ರಚನೆಗೆ ಹಿಂದೂ ಸಮುದಾಯದ ಕೊಡುಗೆಗಳನ್ನು ಗುರುತಿಸುತ್ತದೆ. ಈ ಉಪಕ್ರಮದೊಂದಿಗೆ, ದೇಶವು ಹಿಂದೂ ತತ್ವಶಾಸ್ತ್ರ, ಮೌಲ್ಯಗಳು ಮತ್ತು ಆಚರಣೆಗಳ ಶ್ರೀಮಂತಿಕೆಯನ್ನು ಆಚರಿಸುತ್ತದೆ, ಪ್ರಪಂಚದ ಅತ್ಯಂತ ಹಳೆಯ ಧರ್ಮಗಳಲ್ಲಿ ಒಂದನ್ನು ಆಳವಾಗಿ ಅರ್ಥಮಾಡಿಕೊಳ್ಳಲು ಪ್ರೋತ್ಸಾಹಿಸುತ್ತದೆ ಎಂದು ಅವರು ಹೇಳಿದ್ದಾರೆ. ಇದಕ್ಕೆ ಪೂರಕವಾಗಿ ಆಸ್ಟ್ರೇಲಿಯಾದ ಪ್ರಧಾನಿ ಅಂತೋನಿ ಅಲ್ಬನೀಸ್ 'ಹಿಂದೂ ದೇವಾಲಯಗಳ ದಾಳಿಗೆ ಆಸ್ಟ್ರೇಲಿಯಾದಲ್ಲಿ ಜಾಗವಿಲ್ಲ' ಎಂದು ಹೇಳಿಕೆ ನೀಡಿದ್ದಾರೆ.

## ರಾಮಜನ್ಮಭೂಮಿ ಅಯೋಧ್ಯೆಯಲ್ಲಿ ಲಕ್ಷ ದೀಪೋತ್ಸವ ಮೂಲಕ ವಿಶ್ವದಾಖಲೆ

ಶ್ರೀರಾಮ ಜನ್ಮಸ್ಥಳ ಅಯೋಧ್ಯೆಯಲ್ಲಿ ನಡೆದ ದೀಪೋತ್ಸವದ ಸಂಭ್ರಮ ಜಾಗತಿಕ ಮಟ್ಟದಲ್ಲಿ ಸುದ್ದಿ ಮಾಡಿದೆ. ಉತ್ತರ ಪ್ರದೇಶದ ಸರಯೂ ನದಿಯ ದಡದಲ್ಲಿರುವ ರಾಮನಗರಿ ಅಯೋಧ್ಯೆಯಲ್ಲಿ ಅದ್ಭುತ ದೀಪೋತ್ಸವವನ್ನು ಆಚರಿಸಲಾಗಿದೆ. 51 ಘಾಟ್‌ಗಳಲ್ಲಿ 22 ಲಕ್ಷ ಮಣ್ಣಿನ ದೀಪಗಳನ್ನು ಬೆಳಗಿಸುವ ಮೂಲಕ 'ಗಿನ್ನಿಸ್ ವಿಶ್ವ ದಾಖಲೆ'ಯನ್ನು ನಿರ್ಮಿಸಲಾಗಿದೆ.



51 ಘಾಟ್‌ಗಳಲ್ಲಿ 22.23 ಲಕ್ಷ ಮಣ್ಣಿನ ದೀಪಗಳನ್ನು ಬೆಳಗಿಸುವ ಮೂಲಕ 'ಗಿನ್ನಿಸ್ ವಿಶ್ವ ದಾಖಲೆ'ಯನ್ನು ನಿರ್ಮಿಸಲಾಗಿದೆ. ಈ ಮೂಲಕ ನಗರದ ಹಿಂದಿನ 17 ಲಕ್ಷ ದೀಪಗಳ ದಾಖಲೆಯನ್ನು ಮುರಿದಿದೆ.

2017 ರಿಂದ ರಾಮಮಂದಿರ ಪ್ರದೇಶದಲ್ಲಿ ಉತ್ಸವವನ್ನು ಆಯೋಜಿಸಲಾಗುತ್ತಿದೆ ಮತ್ತು ಪ್ರತಿ ವರ್ಷ ಹೊಸ ದಾಖಲೆಯನ್ನು ಸೃಷ್ಟಿಸುತ್ತಿದೆ. ಈ ಬಾರಿಯ ದೀಪೋತ್ಸವದಲ್ಲಿ ಹೊಸ ದಾಖಲೆ ಸೃಷ್ಟಿಯಾಗಿದೆ. 50ಕ್ಕೂ ಹೆಚ್ಚು ದೇಶಗಳ ರಾಯಭಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪ್ಯಾಲೆಸ್ತೀನ್‌ಗೆ 30 ಟನ್ ಅಗತ್ಯ ವೈದ್ಯಕೀಯ ಸಾಮಗ್ರಿಗಳನ್ನು ಕಳುಹಿಸಿದ ಭಾರತ

ಭಾರತವು ಮತ್ತೆ ಪ್ಯಾಲೇಸ್ತೀನ್‌ಗೆ ಮಾನವೀಯಾ ನೆರವನ್ನು ಕಳುಹಿಸಿಕೊಟ್ಟಿದೆ. 30 ಟನ್‌ಗಳಷ್ಟು ವೈದ್ಯಕೀಯ ಸಾಮಗ್ರಿಗಳನ್ನು ಒಳಗೊಂಡ ಸಾಗಣೆಯನ್ನು ಪ್ಯಾಲೆಸ್ಟೈನ್‌ನ ಜನರನ್ನು ಬೆಂಬಲಿಸುವ ಭಾರತದ ಬದ್ಧತೆಯ ಭಾಗವಾಗಿ ಕಳುಹಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀಪ್ ಜೈಸ್ವಾಲ್ ಮಾಹಿತಿ ನೀಡಿದ್ದಾರೆ. ಈ ರವಾನೆಯು ಅಗತ್ಯ ಔಷಧಗಳು ಮತ್ತು ಕ್ಯಾನ್ಸರ್ ವಿರೋಧಿ ಔಷಧಗಳನ್ನು ಒಳಗೊಂಡಿದೆ ಎಂದಿದ್ದಾರೆ. ನಿಯರ್ ಈಸ್ಟ್‌ನಲ್ಲಿರುವ ಪ್ಯಾಲೆಸ್ತೀನ್ ನಿರಾಶ್ರಿತರಿಗಾಗಿ ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾರ್ಯಗಳ ಏಜೆನ್ಸಿ (ಯುಎನ್‌ಆರ್‌ಡಬ್ಲ್ಯುಎ) ಮೂಲಕ ಭಾರತವು ಪ್ಯಾಲೆಸ್ತೀನ್ ಜನರಿಗೆ ಮಾನವೀಯ ಸಹಾಯವನ್ನು ಕಳುಹಿಸುತ್ತದೆ.



**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.